ಇಲಾಖೆ / ವಿಷಯ : DEPARTMENT / SUBJECT: ಮಾನ್ಯ ಸಭಾಧ್ಯಕ್ಷರವರು

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE: 20/02/2020

**ಸದನ ಸ್ವಾರಸ್ಯ**

# ಮಾತನಾಡುವಾಗ ಎಚ್ಚರವಿರಲಿ

**ವಿಧಾನಸಭೆ:** ಸದನ ಕಲಾಪದಲ್ಲಿ ಬುಧವಾರ ಮಂಗಳೂರು ಗಲಭೆಗೆ ಸಂಬಂಧಿಸಿದಂತೆ ಆಡಳಿತ- ಪ್ರತಿಪಕ್ಷದ ನಡುವೆ ಆರೋಪ ಪ್ರತ್ಯಾರೋಪ ನಡೆಯುತ್ತಿದ್ದ ವೇಳೆ, ಒಟ್ಟಿಗೆ ಹತ್ತಾರು ಶಾಸಕರು ಎದ್ದು ನಿಂತು ಮಾತನಾಡಲು ಮುಂದಾಗಿದ್ದಕ್ಕೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಗರಂ ಆದರು.



ನೂತನವಾಗಿ ಶಾಸಕರಾಗಿರುವವರು ಮಾತನಾಡುವಾಗ ಎಚ್ಚರವಹಿಸಬೇಕು. ನಿಮಗಿಷ್ಟ ಬಂದ ರೀತಿ ಮಾತನಾಡಲು ನಾನು ಬಿಡುವುದಿಲ್ಲ. ಯಾರಿಗೆ ಅವಕಾಶ ನೀಡಿದ್ದೇನೋ ಅವರು ಮಾತ್ರ ಮಾತನಾಡುವುದಕ್ಕೆ ಬಿಡುತ್ತೇನೆ. ಸ್ಪೀಕರ್ ಆಗುವಾಗಲೇ ಪೀಠದಿಂದ ಎದ್ದು ಮಾತನಾಡುವುದಿಲ್ಲ ಎನ್ನುವ ಮಾತನ್ನು ನೀಡಿರುವುದಕ್ಕೆ ನಾನು ಪೀಠದಿಂದ ಏಳುತ್ತಿಲ್ಲ. ಆದರೆ ನಾನು ಎದ್ದುನಿಂತು ಮಾತನಾಡುವ ಪರಿಸ್ಥಿತಿಯನ್ನು ತರಬೇಡಿ ಎಂದು ಎಚ್ಚರಿಕೆ ನೀಡಿದರು. ಈಗಾಗಲೇ ಹೇಳಿದಂತೆ ಪ್ರತಿಯೊಬ್ಬರಿಗೂ ಮಾತನಾಡಲು ಅವಕಾಶ ನೀಡುತ್ತೇನೆ. ಆದ್ದರಿಂದ ಯಾರು ಮಾತನಾಡಬೇಕೋ ಅವರು ಸಚೇತಕರ ಮೂಲಕ ಚೀಟಿ ಕಳುಹಿಸಿ, ಒಬ್ಬರಿಗೆ ಅವಕಾಶ ನೀಡುತ್ತೇನೆ. ಅದನ್ನು ಬಿಟ್ಟು ಈ ರೀತಿ ಗುಂಪಾಗಿ ಮಾತನಾಡಿ ಗೊಂದಲ ಸೃಷ್ಟಿಸಿದರೆ ನಾಡಿಗೆ ಯಾವ ಸಂದೇಶವನ್ನು ಕಳುಹಿಸುತ್ತೀರಾ? ಪೀಠದ ಘನತೆಯೊಂದಿಗೆ ನಿಮ್ಮ ಘನತೆಯನ್ನು ಕಾಪಾಡುವ ಜವಾಬ್ದಾರಿ ನನ್ನ ಮೇಲಿದೆ ಎಂದು ಅಸಮಾಧಾನ ಹೊರಹಾಕಿದರು.